3

# ಭೂಲೋಕದ ಮೇಲೆ ಕುಮಾರನ ದೈವತ್ವವನ್ನು ಪ್ರತಿಬಿಂಬಿಸುವ ಬೈಬಲಿನ ಮಾತುಗಳು

ದೇವರು ಮಾನವ ಕುಲವನ್ನು ಸೃಷ್ಟಿಸಿದ ಕೆಲ ಸಮಯದ ನಂತರ, ಯಾವುದೋ ಒಂದು ಭಯಂಕರವಾಗಿ ತಪ್ಪಾಗಿ ಹೋಯಿತು. ಪುರುಷನು ಹಾಗೂ ಸ್ತ್ರೀಯು ಸ್ವಯಂ ಸೇವೆ ಮಾಡಿಕೊಳ್ಳುವ ಮಾರ್ಗವನ್ನು ಆಯ್ಕೆಮಾಡಿಕೊಂಡು ದೇವರ ಸಂರಕ್ಷಣೆಯ ಎಚ್ಚರಿಕೆಗಳನ್ನು ತಿರಸ್ಕರಿಸಿದರು. ಈ ಪಾಪವು ದೇವರೊಂದಿಗಿನ ಅವರ ಅನ್ಯೋನ್ಯ ತೆಯನ್ನು ಬಲಿಕೊಡುವಂತಾಯಿತು. ಹಾಗೂ ಮರಣದ ಭಯಾನಕತೆಯನ್ನು ತಂದಿತು. ದೇವರು ಹಾಗೂ ಆದಾಮ ಮತ್ತು ಹವ್ವರ ಮಧ್ಯದಲ್ಲಿ ಒಡಕು ಆಳವಾ ಯಿತು ಹಾಗೂ ವಿಶಾಲವಾಯಿತು. ಪರಿಣಾಮಗಳು ಅತಿಯಾದವುಗಳಾದವು. ಅವು ನಮ್ಮ ಮೇಲೆಯೂ ಪರಿಣಾಮ ಮಾಡುತ್ತಿವೆ. ಎಣ್ಣೆ ಡ್ರಿಲ್ಲಿಂಗದಲ್ಲಿ ಉಪಯೋಗಿಸುವ ಸರಪಣಿಯ ಪ್ರತಿಯೊಂದು ಕೊಂಡಿಯು ಎಣ್ಣೆಯಿಂದ ಸವರಲ್ಪಡುವಂತೆ ಮಾನವ ಚರಿತ್ರೆಯಲ್ಲಿಯ ಪ್ರತಿಯೊಂದು ಸಂತತಿಯು ಜೋಡಿಸಲ್ಪಟ್ಟಿದೆ ಮತ್ತು ಪಾಪದೊಂದಿಗೆ ಸವರಲ್ಪಟ್ಟಿರುತ್ತದೆ. ಇದು ಬದಲಾಯಿಸಲ್ಪಡದಿದ್ದರೆ ಮಾನವ ಜನಾಂಗವು ಮರಣಕ್ಕೆ ದಂಡಿಸಲ್ಪಟ್ಟಿರುವುದು (ರೋಮಾಪುರ 5:12). ನಾವು ದೇವರಿಂದ ಬೇರ್ಪಡಿಸಲ್ಪಟ್ಟಿರು ವೆವು ಹಾಗೂ ಜಗತ್ತಿನಲ್ಲಿ ನಿರೀಕ್ಷೆಯಿಲ್ಲದವರಾಗಿರುವೆವು (ಎಫೆಸ 2:12). ನಮ್ಮ ಪರ ವಾಗಿ ದೇವರು ಕಾರ್ಯಮಾಡಿರದಿದ್ದರೆ ನಾವೆಲ್ಲರೂ ಕಳೆದು ಹೋಗುಬಹುದಿತ್ತು.

ಪ್ರೀತಿ, ದಯೆ ಹಾಗೂ ಕೃಪೆಯ ಅಗ್ರಾಹ್ಯವಾದ ಪ್ರದರ್ಶಿಸುವಿಕೆಯಲ್ಲಿ ದೇವರು ವ್ಯಕ್ತಿಯಾಗಿ ಭೂಲೋಕಕ್ಕೆ ಬಂದನು. ಆತನು ಡೊಂಗರನ್ನು ದಾಟಿಬಂದನು. ಆತನು ಸೇತುವೆಯನ್ನು ಕಟ್ಟಿದನು. ಅದರ ಎತ್ತರ, ಆಳ, ಅಗಲ ಇಲ್ಲವೇ ಉದ್ದದ ಅಳತೆ ಮಾಡಲಾಗದ ಪ್ರೀತಿಯಿಂದ ಆತನು ಕಾರ್ಯಮಾಡಿದನು. ಆತನು ಮಾಡಿದ್ದು ಕೇವಲ ಅನಿರೀಕ್ಷಿತವಾದದ್ದಾಗಿರುವದಿಲ್ಲ: ಅದು ಅರ್ಹತೆಯಿಲ್ಲದವರಿಗಾಗಿ ಇತ್ತು. ಅದೆಂಥ ಮಹಿಮೆಯುಳ್ಳ, ಆನಂದವುಳ್ಳ, ಚೈತನ್ಯಗೊಳಿಸುವ ಶುಭವಾರ್ತೆಯಾಗಿತ್ತು. *ಇನ್ನೊಂದೆಡೆಯಲ್ಲಿ ತಪ್ಪಾಗಿ ತಿಳಿದುಕೊಳ್ಳುವುದು ಎಷ್ಟು ಸುಲಭವಾದದ್ದಾಗಿತ್ತು.* ಈ ಪಾಠದಲ್ಲಿ ನಮ್ಮ ಸ್ಪಷ್ಟವಾದ ಗುರಿಯು ದೇವರು ನಮಗಾಗಿ ಮಾಡಿದ್ದರ ತಿಳುವಳಿಕೆಯನ್ನು ಆಳವಾಗಿ ಅರ್ಥಮಾಡಿಕೊಳ್ಳುವುದು. ಅದಕ್ಕಾಗಿ ನಮ್ಮ ಮೆಚ್ಚಿಕೆಗಳನ್ನು ಎತ್ತರಿಸಿ ಕೊಳ್ಳು ವುದು ಆಗಿದೆ.

ಹಳೇ ಒಡಂಬಡಿಕೆಯ ವಾಗ್ದಾನಗಳಲ್ಲಿಯೂ ಪ್ರವಾದನೆಗಳಲ್ಲಿಯೂ ಅನೇಕವುಗಳು ದೇವರ ಮೆಸ್ಸೀಯನ ಬರೋಣಕ್ಕೆ ಸಂಬಂಧಿಸಿದವುಗಳಾಗಿವೆ. ಇವುಗಳ ನೆರವೇರು ವಿಕೆಯು ಯೇಸುವಿನ ಬರೋಣದಲ್ಲಿ ಕಂಡು ಬರುತ್ತದೆ. ಯೋಹಾನನ ಬರಹಗಳೊಂದಿಗೆ

ಹೊಸ ಒಡಂಬಡಿಕೆಯು ಪೂರ್ತಿಗೊಳಿಸಿದ ಸಮಯದಲ್ಲಿ ಯೇಸುವು ದೇವರ ಕುಮಾರನು ಆಗಿರುವನು ಅಷ್ಟೇ ಅಲ್ಲ, ಆದರೆ ಆತನು ಕುಮಾರನಾದ ದೇವರೂ ಸಹ ಆಗಿದ್ದಾನೆಂಬುದು ಸಭೆಗೂ ಲೋಕಕ್ಕೂ ಪ್ರಕಟಿಸಲ್ಪಟ್ಟಿತು (ಯೋಹಾನ 1:1-14; 20:26-31).

## "ದೇವರ ಕುಮಾರ"

"ದೇವರ ಕುಮಾರ" ಎಂಬ ಮಾತು ಹಳೇ ಒಡಂಬಡಿಕೆಯಲ್ಲಿ ಇಲ್ಲವೇ ಹೊಸ ಒಡಂಬಡಿಕೆಯಲ್ಲಿ ದೈವತ್ವದ ತತ್ವವನ್ನು ಹೊಂದಿಕೊಂಡಿರಬೇಕಾದ ಅವಶ್ಯಕತೆಯಿರುವದಿಲ್ಲ. "ನೀವು ನಿಮ್ಮ ಕರ್ತನಾದ ದೇವರ ಮಕ್ಕಳು ಆಗಿರುವಿರಿ" ಎಂದು ಹೇಳಿ ಮೋಶೆಯು ಇಸ್ರಾಯೇಲ್ಯರೊಂದಿಗೆ ಮಾತಾಡಿದನು. ಇಸ್ರಾಯೇಲ್ಯರು "ದೇವರ ಮಕ್ಕಳು" ಎಂದು ಕರೆಯಲ್ಪಟ್ಟರೂ ತಾವು ದೈವಿಕ ಜೀವಿಗಳಾಗಿರುವದಿಲ್ಲ ಎಂಬುದನ್ನು ತಿಳಿದಿದ್ದರು. ಹೊಸ ಒಡಂಬಡಿಕೆಯಲ್ಲಿ "ಸಮಾಧಾನ ಪಡಿಸುವವರು ದೇವರ ಮಕ್ಕಳು ಎಂದು ಕರೆಯಲ್ಪಡುವರು" ಎಂದು ಯೇಸು ಹೇಳುವದನ್ನು ಕಂಡು ಕೊಳ್ಳುತ್ತೇವೆ (ಮತ್ತಾಯ 5:9). ಸಮಾಧಾನ ಪಡಿಸುವವನು ದೇವತ್ವನಾಗಿದ್ದಾನೆಂದು ಯೇಸುವಿನ ಮಾತನ್ನು ಯಾರೂ ಅರ್ಥಮಾಡಿಕೊಳ್ಳಲಿಲ್ಲ. ಅಂಥ ಅನೇಕ ಉದಾಹರಣೆಗಳಲ್ಲಿ "ದೇವರ ಮಗ (ಮಕ್ಕಳು)" ಎಂಬ ಮಾತು ಹಳೇ ಒಡಂಬಡಿಕೆಯಲ್ಲಿಯೂ ಹೊಸ ಒಡಂಬಡಿಕೆಯಲ್ಲಿಯೂ ದೇವತ್ವದ ಅರ್ಥ ಹೊಂದಿರುವುದು ಕಂಡುಬರುವದಿಲ್ಲ. ಒಂದೇ ವ್ಯತ್ಯಾಸ, ಅದು ಅತೀ ದೊಡ್ಡದಾದದ್ದು - ಅದು ಯೇಸುವಿಗೆ ಅನ್ವಯಿಸಿದಾಗ ಮಾತ್ರ ಅರ್ಥ ಕೊಡುತ್ತದೆ.

ಇಲ್ಲಿಯೂ ಸಹ, ಯೇಸುವಿನ ಇಹಲೋಕದ ಜೀವನದ ಸಮಯದಲ್ಲಿ ಈ ವರ್ಣನೆಯನ್ನು ಅನ್ವಯಿಸಿದವರ ಯಾರ ಮನಸ್ಸಿನಲ್ಲಿಯೂ ದೇವತ್ವವು ಇರಲೇ ಇಲ್ಲ. ದೇವರ ಮೆಸ್ಸೀಯರಾಗಿದ್ದ ವ್ಯಕ್ತಿಗಳಿಂದ ತಮ್ಮ ಚರಿತ್ರೆಯು ಗುರುತಿಸಲ್ಪಟ್ಟಿದೆಯೆಂದು ಇಸ್ರಾಯೇಲ್ಯರು ತಿಳಿದಿದ್ದರು. "ಮೆಸ್ಸೀಯ" ಅಂದರೆ "ಅಭಿಷಿಕ್ತ ಅಥವಾ ಆಯ್ದುಕೊಂಡವನು" ಎಂದರ್ಥವಾಗುತ್ತದೆ. ತನ್ನ ಜನಾಂಗವನ್ನು ನಡಿಸಲು ಮತ್ತು ಕಾಪಾಡಿಕೊಂಡು ಹೋಗಲು ದೇವರು ಅನೇಕ ನಾಯಕರನ್ನೂ ಅರಸುಗಳನ್ನೂ ಅಭಿಷೇಕಿಸಿದನು. ಕೆಲವು ಸಲ ಅವರು "ದೇವರ ಮಕ್ಕಳು" ಎಂದು ಕರೆಯಲ್ಪಟ್ಟರು (ಕೀರ್ತನೆ 89:20-29; 2 ಸಮುವೇಲ 7:11ಬಿ-16). ಇಸ್ರಾಯೇಲ ಜನಾಂಗವು ಒಟ್ಟಾಗಿ ವಿಮೋಚನಕಾಂಡ 4:22 ಹಾಗೂ ಹೋಶೇಯ 11:1ರ ಪ್ರಕಾರ ದೇವರಮಗ ಎಂದು ಕರೆಯಲ್ಪಟ್ಟಿತು.

ಹೀಗೆ, ಹಿಬ್ರೂ! ಇಸ್ರಾಯೇಲ/ಯೆಹೂದಿ ಮನಸ್ಸಿನಲ್ಲಿ "ದೇವರ ಕುಮಾರ" ಎಂಬ ಮಾತಿಗೆ ಆಳವಾದ ಅರ್ಥವಿತ್ತು. ಇಸ್ರಾಯೇಲ್ಯರು ಆತನ ಆಯ್ಕೆಯಾದ ಜನಾಂಗವಾಗಿದ್ದರು, ಅವರು ಆತನ ಕುಟುಂಬದ ಸದಸ್ಯರಾಗಿದ್ದರು. ಅವರು ಆತನ ಚಿತ್ತವನ್ನು ಸ್ವೀಕರಿಸುವವರೂ ಅನುಭವಿಸುವವರೂ ಆಗಿದ್ದರು. "ದೇವರ ಮಗನಂತೆ" ಇಸ್ರಾಯೇಲಿಗೆ ಅಮೂಲ್ಯ ಸ್ವಾಸ್ಥ್ಯತೇಯಿತ್ತು. "ದೇವರ ಕುಮಾರರಂತೆ" ಅವರ ಅನೇಕ ನಾಯಕರೂ ಅರಸರುಗಳೂ ಯೆಹೋವನಿಂದ ವಿಶೇಷವಾಗಿ ನೇಮಿಸಲ್ಪಟ್ಟವರಾಗಿದ್ದರು.

ಸ್ನಾನಿಕನಾದ ಯೋಹಾನನು ತನ್ನ ಸೇವೆಯನ್ನು ಪ್ರಾರಂಭಿಸಿದಾಗ, ತಾನು ಮೆಸ್ಸೀಯನು ಅಲ್ಲ ಎಂದು ಕೂಡಲೇ ಧಾರ್ಮಿಕ ಅಧಿಕಾರಿಗಳಿಗೆ ಸ್ಪಷ್ಟಪಡಿಸಿದನು.

ಮೆಸ್ಸೀಯನಿಗಾಗಿ ಅವನು ಮಾರ್ಗಸಿದ್ಧಪಡಿಸುತ್ತಿದ್ದನು. ಯೋಹಾನನು ಯೇಸುವನ್ನು ಮೆಸ್ಸೀಯನೆಂದು ಎಂದೂ ಕರೆಯಲಿಲ್ಲ. ಆದರೆ ತನ್ನ ನಂತರ ಬರುವವನು - ಆತನು ನಿಜವಾಗಿಯೂ ಅವನಿಗಿಂತ ಮೊದಲಿನವನಾಗಿದ್ದನು - ತನಗಿಂಥ ಹೆಚ್ಚು ದೊಡ್ಡವನಾಗಿದ್ದಾನೆಂದು ಒತ್ತಿ ಹೇಳಿದನು. ಅವನ ಹೇಳಿಕೆಗಳು ಮೆಸ್ಸೀಯತನವನ್ನು ಒಳಗೊಂಡಿದ್ದವು ಮತ್ತು ಯೇಸುವಿನ ಒಡೆತನವನ್ನು ಒಪ್ಪಿಕೊಂಡವು (ಮತ್ತಾಯ 3:1-3; ಯೋಹಾನ 1:15; 19-23, 30).

## "ಅರಸ"

ಆದುದರಿಂದ ಯೇಸು ತನ್ನ ಬಾಪ್ತಿಸ್ಮದ ನಂತರ ತನ್ನ ಸೇವೆಯನ್ನು ಪ್ರಾಂಭಿಸಿದಾಗ ಆತನು ಬಹಳ ಸಲ ಆತನ ಯೆಹೂದೀ - ಸಮಕಾಲಿನರಿಂದ ಅರಸುತನದ ಮಾತುಗಳಲ್ಲಿ ಸಂಬಂಧಿಸಿ ಹೇಳಲ್ಪಟ್ಟಿದ್ದು ಆಶ್ಚರ್ಯಕರವಾದದ್ದಾಗಿರುವದಿಲ್ಲ. ಕೆಲವರು ಆತನು ಮಹಾ ಪ್ರವಾದಿಯಾಗಿದ್ದನು ಎಂದು ನಂಬಿ ಆತನನ್ನು ಅರಸನನ್ನಾಗಿ ಮಾಡಲು ಬಯಸಿದರು (ಯೋಹಾನ 6:14, 15). ಇತರರು "ಕರ್ತನ ಹೆಸರಿನಲ್ಲಿ ಬರುವ ಅರಸನಿಗೆ ಆಶೀರ್ವಾದ" ಎಂದು ಹೇಳಿದರು (ಲೂಕ 19:38; ನೋಡಿರಿ ಕೀರ್ತನೆ 118:26).

ಕೆಲವು ಜನ ಅನ್ಯರೂ ಸಹ ಯೇಸುವಿನ ಜೀವನ ಮತ್ತು ಸೇವೆಯ ಸುತ್ತಲೂ ಇದ್ದ ಅರಸುತನದ ಪ್ರಭಾವವನ್ನು ತಿಳಿದು ಕೊಂಡಿದ್ದರು, ಆತನ ಜನನದ ಸಮಯದಲ್ಲಿ ಮೂಡಣದ ಪಂಡಿತರು, ಬಹುಶಃ ಪೂರ್ವದಿಂದ ಪರ್ಷಿಯಾ ಇಲ್ಲವೇ ಅರೇಬಿಯದ ಅನ್ಯಜನಾಂಗದವರು, "ಯೆಹೂದ್ಯರಿಗೆ ಅರಸನಾಗಿ" ಹುಟ್ಟಿದಾತನನ್ನು ಹುಡುಕುತ್ತ ಬಂದರು (ಮತ್ತಾಯ 2:1, 2). ಯೇಸುವಿನ ಜೀವನದ ಅಂತ್ಯದಲ್ಲಿ ಪಿಲಾತನು, ರೋಮನ್ ರಾಜ್ಯಪಾಲನು, ಯೇಸುವಿನ ಪ್ರಖ್ಯಾತಿಯ ಬಗ್ಗೆ ಹಾಗೂ ಆತನು ಮೆಸ್ಸೀಯನು, ಅರಸನು, ದೇವರ ಕುಮಾರನು ಎಂಬುದರ ಒಪ್ಪಿಗೆಯ ಬಗ್ಗೆ ಚಿಂತಿಸುವವನಾಗಿದ್ದನು (ಮತ್ತಾಯ 26:63, 64; ಯೋಹಾನ 18:37). ಯೇಸುವು ಶಿಲುಬೆಗೆ ಹಾಕಲ್ಪಟ್ಟ ಸಮಯದಲ್ಲಿ ಪಿಲಾತನು ಶಿಲುಬೆಯ ಮೇಲೆ ಒಂದು ಸಂಕೇತವನ್ನು ಇಡಲು ಅಪ್ಪಣೆ ಮಾಡಿದನು. ಅದರ ಮೇಲೆ "ನಜರೇತಿನ ಯೇಸು, ಯೆಹೂದ್ಯರ ಅರಸನು" ಎಂದು ಬರೆಯಲಾಗಿತ್ತು (ಯೋಹಾನ 19:19).

## "ಮೆಸ್ಸೀಯನು"

ತನ್ನ ಜೀವಿತದ ಸಮಯದಲ್ಲಿ, ಯೇಸುವು ಕೆಲವು ಜನ ಅನ್ಯರಿಂದಲೂ ಅನೇಕ ಯೆಹೂದ್ಯರಿಂದಲೂ ದೇವರಿಂದ ಅಭಿಷಿಕ್ತನಾದ ಅರಸ ಮತ್ತು ಕುಮಾರ - "ಮೆಸ್ಸೀಯ" ಎಂದು ನೋಡಲ್ಪಟ್ಟಿದ್ದಾನೆ. ಈ ಸ್ಥಾನವನ್ನು ಯೇಸು ತಾನೇ ಸ್ವೀಕರಿಸಿಕೊಂಡನು ಹಾಗೂ ಆತನಿಗೆ ಈ ಪಾತ್ರಗಳನ್ನು ಹೊರಸಿದವರ ಸ್ವೀಕಾರವನ್ನು ಒಪ್ಪಿಕೊಂಡನು (ಮತ್ತಾಯ 16:16; ಯೋಹಾನ 1:49). ಹೀಗಿದ್ದರೂ ಸ್ನಾನಿಕನಾದ ಯೋಹಾನನು ಯೇಸುವನ್ನು ಮೆಸ್ಸೀಯನೆಂದು ಎಂದೂ ಕರೆಯದಿದ್ದಂತೆ, ಯೇಸುವು ತನ್ನನ್ನು ತನ್ನ ಸೇವೆಯ ಸಮಯದಲ್ಲಿ ಮೆಸ್ಸೀಯನೆಂದು ಗುರುತಿಸಿಕೊಳ್ಳಲು ಒಲವು ಇಲ್ಲದವನಂತೆ ಕಂಡುಬಂದನು. ಇದು ಆತನ ಮುಂದುವರಿಕೆಯಲ್ಲಿ ಸೇವೆಯ "ಆತನ ಸ್ವಂತ - ವೇಳಾ ಪಟ್ಟಿ" ಕಾರಣದಿಂದಾಗಿರಬಹುದು (ಮತ್ತಾಯ 16:20; 26:18 ಯೋಹಾನ

2:4; 7:6; 8:20; 17:1), ಇಲ್ಲವೇ ತಮ್ಮ ಮುಂತಿಳಿಸಲ್ಪಟ್ಟ ಮೆಸ್ಸೀಯನ ಬಗೆಗಿನ ಯೆಹೂದಿ ಜನರ ಅನೇಕ ತಪ್ಪು ತಿಳುವಳಿಕೆಯು ತನಗೆ ಅನ್ವಯಿಸಲ್ಪಡಬಾರದೆಂದು ಆತನು ದೂರವಾಗಿದ್ದಿರಬಹುದು. ಅತೀ ನಿಶ್ಚಿತವಾಗಿಯೂ ಅದು ಆತನಲ್ಲಿ "ಮೆಸ್ಸೀಯತ್ವದ ಅರಿವು" ಕೊರತೆಯಾಗಿರುವ ಕಾರಣದಿಂದ ಎಂದಾಗಿರುವದಿಲ್ಲ.[1]

ಈ ಮಾತುಗಳು ಯೇಸುವನ್ನು ವಿವರಿಸಲು ಉಪಯೋಗಿಸಲ್ಪಟ್ಟಿರುವದರಿಂದ, ಅವುಗಳನ್ನು ಉಪಯೋಗಿಸುತ್ತಿದ್ದವರು ಯೇಸುವು ದೇವರಾಗಿದ್ದನು ಎಂದು ಅವಶ್ಯವಾಗಿ ಯೋಚಿಸಬೇಕಾಗಿರಲಿಲ್ಲ. ಯೇಸುವು ದೇವರಾಗಿದ್ದಾನೆ ಎಂಬ ಸ್ಪಷ್ಟವಾದ ಅರಿಕೆಯು ಯೇಸುವಿನಿಂದಲೇ ಬರಲಿಲ್ಲ. ಆದರೆ ಆತನ ಪುನರುತ್ಥಾನದ ನಂತರ "ಸಂಶಯ ಪಡುವ" ಥೋಮನು ಗಾಯಗಳ ಕಲೆಗಳುಳ್ಳ ಯೇಸುವಿನ ದೇಹವನ್ನು ನೋಡಿದಾಗ, "ನನ್ನ ಕರ್ತನೇ, ನನ್ನ ದೇವರೇ" ಎಂದು ಹೇಳಿದನು (ಯೋಹಾನ 20:28). ಅಂತಿಮ ಸ್ಥಿತಿಯು ತಲುಪಿತ್ತು. ಪುನರುತ್ಥಾನದ ಜಯವು ತೀರ್ಮಾನಿಸುವುದಾಗಿತ್ತು. ಯೇಸುವಿನ ಪೂರ್ಣ ಗುರುತು ಈಗ ಒಪ್ಪಿಕೊಳ್ಳಲ್ಪಟ್ಟಿತು. ಯೇಸುವು ದೇವರಾಗಿದ್ದಾನೆ (ದೇವತ್ವವಾಗಿದ್ದಾನೆ)!

---

ಟಿಪ್ಪಣಿ

[1]John Bright, *The Kingdom of God* (Nashville: Abingdon Press, 1953), 198-99.

© 2009 Truth for Today